## "ಸಂಪನ್ನಂ ಯೋಗ್ಯಮೌಷಧಂ..."

ಪ್ರಾಚೀನ ಕಾಲದಿಂದಲೂ ನಮ್ಮ ದೇಶದಲ್ಲಿ ಆಯುರ್ವೇದವು ಪ್ರಚಲಿತವಿರುವ ಜನಪ್ರಿಯ ಚಿಕಿತ್ಸಾ ಪದ್ಧತಿ. ಹಿಂದಿನಂತೆ ಬೇಕೆಂದಾಗ ಬೇಕಾದ ಗಿಡಮೂಲಿಕೆಗಳನ್ನು ಆರಿಸಿ ತಂದು ಔಷಧಿ ತಯಾರಿಸಿ ಪ್ರಯೋಗಿಸುವುದು ಕಷ್ಟಸಾಧ್ಯ. ಹಾಗೆಂದು ಉಪಯುಕ್ತ ಔಷಧಿ ಲಭ್ಯವಿಲ್ಲದಿದ್ದಲ್ಲಿ ಚಿಕಿತ್ಸೆ ಅಸಂಪೂರ್ಣ ಅಥವಾ ನಿಷ್ಫಲವಾಗುವುದಲ್ಲವೇ. ಅದಕ್ಕೆ ಆಯುರ್ವೇದ ಶಾಸ್ತ್ರವು ಚಿಕಿತ್ಸೆಗೆ ಆಧಾರವಾದ ನಾಲ್ಕು ವಿಷಯಗಳನ್ನು 'ಪಾದ ಚತುಷ್ಟಯಂ' ಎಂದು ಉಲ್ಲೇಖಿಸಿ ಯೋಗ್ಯವೂ ಗುಣ ಸಂಪನ್ನವೂ ಆದ ಔಷಧಿಯ ಪ್ರಾಧಾನ್ಯತೆಯನ್ನು ಎತ್ತಿ ಹಿಡಿದಿರುವುದು.

ವೈದ್ಯರತ್ನಂ ನರ್ಸಿಂಗ್ ಹೋಮ್



ಈಗಿನ ವೈದ್ಯ ಪದವೀದರರು ಈ ನಿಟ್ಟಿನಲ್ಲಿ ಒಬ್ಬೊಬ್ಬರೂ ಅವರವರಿಗೆ ಸರಿಯೆಂದು ಕಂಡ ಆಯ್ದ ಔಷಧ ನಿರ್ಮಾಣ ಸಂಸ್ಥೆಗಳ ಔಷಧ ಉತ್ಪನ್ನಗಳನ್ನು ತಮ್ಮ ವೈದ್ಯ ವೃತ್ತಿಗೆ ಅವಲಂಬಿಸಿರುತ್ತಾರೆ. ಕಳೆದ ಎಂಟು ದಶಕಗಳಿಂದ ಕೇರಳದ ಪ್ರಸಿದ್ಧ 'ಅಷ್ಟವೈದ್ಯ' ಪರಂಪರೆಯ ವಂಶಜರು ಸ್ಥಾಪಿಸಿದ 'ವೈದ್ಯರತ್ನಂ ಔಷಧ ಶಾಲಾ'ವು ವೈದ್ಯರಿಗೆ ಒಂದು ಅವಲಂಬನೀಯ ಸಂಸ್ಥೆಯಾಗಿ ಬೆಳೆದು ನಿಂತಿದೆ.

ಆಯುರ್ವೇದ ಮ್ಯೂಸಿಯಂ



ಗುಣಮಟ್ಟದಲ್ಲಿ ಎರಡು ಮಾತಿಲ್ಲದ ಈ ಸಂಸ್ಥೆಯ ಔಷಧ ಉತ್ಪನ್ನಗಳ ಬಗ್ಗೆ ಆಯುರ್ವೇದ ವೈದ್ಯ ಸಮೂಹದಲ್ಲಿ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ಬಹುತೇಕ ಎಲ್ಲಾ ರೋಗಗಳಿಗೂ ಉಪಯುಕ್ತವಾದ ಔಷಧಿಗಳನ್ನು ತಯಾರಿಸಿ ವಿತರಿಸುವ 'ವೈದ್ಯರತ್ನಂ' ವೈದ್ಯ

ವೈದ್ಯರತ್ನಂ ಬೆಂಗಳೂರು ಟ್ರೀಟ್‌ಮೆಂಟ್ ಸೆಂಟರ್



ವಿದ್ಯಾರ್ಥಿಗಳಿಗೆ ತರಬೇತಿಯನ್ನೂ ನೀಡುತ್ತಿದೆ. ಕೇರಳದ ತ್ರಿಚೂರು ಜಿಲ್ಲೆಯ ತೈಕಾಟ್ಟುಶೇರಿ ಎಂಬ ಗ್ರಾಮದಲ್ಲಿ ವಿಶಾಲವಾದ ಔಷಧ ತಯಾರಿಕಾ ಘಟಕಗಳು, ಸುಸಜ್ಜಿತ ಆಸ್ಪತ್ರೆ, ಸಂಶೋಧನಾ ಘಟಕ, ಆಯುರ್ವೇದ ಮಹಾವಿದ್ಯಾಲಯ, ಔಷಧ ವನ, ಆಯುರ್ವೇದ ಮ್ಯೂಸಿಯಂ, ಮುಂತಾದ ಸಂಸ್ಥೆಗಳು ವಿಶೇಷ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ.


ಆಯುರ್ವೇದ ಮ್ಯೂಸಿಯಂ

ಕರ್ನಾಟಕದಲ್ಲಿ ವೈದ್ಯರತ್ನಂನ ಔಷಧ ಮಳಿಗೆಗಳು ಹಾಗೂ ವಿತರಕರು ಸೇವಾ ಸನ್ನದ್ಧರಾಗಿದ್ದಾರೆ. ಪ್ರಸ್ತುತ ಲೇಖಕರು ಬೆಂಗಳೂರಿನ ಹೆಚ್. ಎಸ್.ಆರ್ ಲೇಔಟ್ ನಲ್ಲಿ ವೈದ್ಯರತ್ನಂ ಸಂಸ್ಥೆಯ ಹಿರಿಯ ವೈದ್ಯರು ಹಾಗೂ ವ್ಯವಸ್ಥಾಪಕರು.



**ಡಾ. ಕೇಶವ ಭಟ್ ಸರ್ಪಂಗಳ**
**94495 93130**